ತುಣಿಕಿನ ಕವಚದ ಒಳಗೆ ಚಿಂತೆಯಿಲ್ಲದೆ ಕೂತಿದ್ದ ಕಪ್ಪನೆಯ ಸಣಕಲು ಕಡ್ಡಿ ಅವನ್ನನ್ನು ಸೆಳೆಯಿತು. ಯಾವ ಮರದ್ದಿದು? ಅಂತ ಮರವೊಂದು ಸಿಕ್ಕರೆ ಎಷ್ಟು ಚೆಂದ! ನಿತ್ಯ ಸೀಸದ ಕಡ್ಡಿಗಳನ್ನು ಹೊಸ ಹೊಸದಾಗಿ ಕತ್ತರಿಸಿಕೊಳ್ಳಬಹುದೆಂದು ಯೋಚಿಸಿದ. ಚಪ್ಪಾಳೆಗಳು, ಹೊಗಳಿಕೆಗಳು ಸಾಗಿಯೆ ಇದ್ದವು. ಈಗ ಅದೆಲ್ಲವನ್ನು ಮರೆತು ಕೈಯಲ್ಲಿದ್ದ ಸೀಸದ ಕಡ್ಡಿಯೊಂದಿಗೆ ಒಂದಾದ. ಈ ಚಪ್ಪಾಳೆಯನ್ನಾದರೂ ಯಾಕೆ ಹೊಡೆಯಬೇಕು? ಯಾರನ್ನೊ ಯಾಕೆ ಪದೇ ಪದೇ ಹೊಗಳಬೇಕು ಎಂಬುದು ಅವನಿಗೆ ಗೊತ್ತಾಗಲಿಲ್ಲ. ಅದರಿಂದ ಒಂದು ಅಂತರವನ್ನು ಕಾಯ್ದುಕೊಂಡೆ ಕೂತಿದ್ದ ಪರಸು. ಸಭೆಯ ಯಾವ ಗೌಜುಗಳೂ ಅವನ ಸೀಸದ ಕಡ್ಡಿಯ ಲೋಕಕ್ಕೆ ಭಂಗ ತರಲಿಲ್ಲ. ಈಗ ಎಲ್ಲರ ಬಳಿಯೂ ಒಂದೊಂದು ಸೀಸದ ಕಡ್ಡಿಗಳೇ! ಈಗ ತಾನು ಮತ್ತು ದೊಡ್ಡ ಬೀದಿಯ ಗುರುಬಸವನೂ ಒಂದೇ ಅಲ್ವಾ? ಅವನ ಬಳಿಯೂ ಇದೆ ಸೀಸದ ಕಡ್ಡಿ, ತನ್ನ ಬಳಿಯೂ ಇದೇ ಸೀಸದ ಕಡ್ಡಿ. ಯಾಕೊ ಮೊದಲ ಬಾರಿಗೆ ಈ ಯೋಚನೆಯಿಂದ ಅವನಿಗೆ ತುಸು ನಿರಾಳವೆನಿಸಿತು.

ಆ ನಿರಾಳತೆಯಲ್ಲೇ ಅವನಿಗೆ ನೆನಪಾಗಿದ್ದು ತನ್ನ ಅಪ್ಪನ ಗಡ್ಡಕ್ಕೆ ನೊರೆ ಹತ್ತಿದ ಚಿತ್ರ. ಬಟ್ಟೆಗೂ, ಮೈಯಿಗೂ ಬಳಕೆಯಾಗುತ್ತಿದ್ದ ಸೋಪು ಅಪ್ಪನ ಗಡ್ಡಕ್ಕೂ ಬಳಕೆಯಾಗುತ್ತಿತ್ತು. ಅವನ ಅಪ್ಪ ಸೋಪನ್ನು ಗಡ್ಡದ ಕೂದಲಿಗೆ ತೀಡಿ ಉಜ್ಜಿ ಉಜ್ಜಿ ನೊರೆ ಬರಿಸಿಕೊಳ್ಳುತ್ತಿದ್ದ. ನೊರೆ ಬರುವ ಸಮಯಕ್ಕೆ ಅವನ ಅಪ್ಪ ಪರಸುನನ್ನು ಕರೆದು ಅಂಗಡಿಗೆ ಅಟ್ಟುತ್ತಿದ್ದ. ಎರಡು ರೂಪಾಯಿ ನೀಡಿ ಬ್ಲೇಡು ತರಲು ಹೇಳುತ್ತಿದ್ದ. ವರ್ಷಕ್ಕೆ ಎರಡೇ ಬ್ಲೇಡು. ಅಪ್ಪ ಗಡ್ಡದ ಮೇಲೆ ಬ್ಲೇಡು ಆಡಿಸಿಕೊಳ್ಳುವಾಗ ಪರಪರ ಸದ್ದು ಜೋರಾಗಿಯೇ ಕೇಳುತ್ತಿತ್ತು. ಆಗಾಗ ರಕ್ತ ಬಂದಿದ್ದು ನೆನಪಿದೆ. ರಕ್ತ ಬರುವುದು ಕಡ್ಡಾಯವೇ ಇರಬೇಕು ಅಂತ ಭಾವಿಸಿದ್ದ. ಮನೆಗೆ ಹೋಗಿ ಹುಡುಕಿದರೆ ಒಂದು ಬ್ಲೇಡಿನ ತುಣುಕು ಸಿಗಬಹುದು ಮತ್ತು ಆ ಬ್ಲೇಡಿನ ತುಣುಕಿನಿಂದ ಮೇಷ್ಟ್ರು ಕೆತ್ತುವಂತೆ ತಾನೂ ಸೀಸದ ಕಡ್ಡಿ ಕೆತ್ತಿಕೊಳ್ಳುವುದೆಂದು ಲೆಕ್ಕ ಹಾಕಿದ. ಹಾಗೆ ಕೂತು ಕೂತು ಅರ್ಥವಾಗದ ಅಸಹನೆಯೊಂದು ಸಭೆಯೆಡೆಗೆ ಮೂಡತೊಡಗಿತು. ಸೀಸದ ಕಡ್ಡಿ ಪಡೆದುಕೊಂಡ ಅನಿವಾರ್ಯಕ್ಕೆ ಇನ್ನೂ ಕೂತಿರಲೇಬೇಕಿತ್ತು. ಬಿಸಿಲಕೋಲು ಈಗ ಕೈಗೆ ಸಿಗದಷ್ಟು ದೂರ ಸಾಗಿತ್ತು. ಸೀಸದ ಕಡ್ಡಿಯೊಂದಿಗಿನ ಲಹರಿಯನ್ನು ಜೋರಾದ ಚಪ್ಪಾಳೆ ಮತ್ತೊಮ್ಮೆ ಅವನನ್ನು ಕೆಡವಿಹಾಕಿತ್ತು. ಚಪ್ಪಾಳೆಯ ಮಗ್ಗುಲಲ್ಲಿ ಸದ್ದು ಹೆಚ್ಚಾಯಿತು. ಬಿಳಿ ಬಟ್ಟೆಯವರು ಎದ್ದು ಹೋದರು.



ಶಿಕ್ಷಕರೊಬ್ಬರು ಬಾಗಿಲಲ್ಲಿ ನಿಂತು ಒಬ್ಬೊಬ್ಬರಿಗೆ ಒಂದೊಂದು ಸಿಹಿಯನ್ನು ಮಕ್ಕಳ ಪಾಲಿಗೆ ಅದೃಷ್ಟ ದಯಪಾಲಿಸುವ ಕಾಳಜಿಯಲ್ಲಿ ನೀಡುತ್ತಿದ್ದರು. ಕೈಗೆ ಸಿಕ್ಕ ಸಿಹಿಯನ್ನು ಬಾಯಿಗಿಟ್ಟುಕೊಂಡು ಮನೆಯಡೆಗೆ ಓಡತೊಡಗಿದರು. ಅವರ ಓಟ ಹೇಗಿತ್ತು ಎಂದರೆ ಶಾಲೆ ಅಟ್ಟಿಸಿಕೊಂಡು ಬಂದಿದೆಯೇನೊ? ಎಂದು ಯಾರಾದರೂ ಭಾವಿಸಬಹುದಿತ್ತು. ಪರಸು ಕೈಗೂ ಒಂದು ಸಿಹಿ ದೊರೆಯಿತು. ಇಡೀ ಜನ್ಮಕ್ಕಿರುವ ಏಕೈಕ ರುಚಿ ಈ ಸಿಹಿ ಮಾತ್ರ ಅಂದುಕೊಂಡವನಂತೆ ಗಬಕ್ಕನೆ ಮುಕ್ಕಿ, ಸೀಸದ ಕಡ್ಡಿಯನ್ನು ಅಂಗೈಯಲ್ಲಿ